Raspberry Pi Foundation

**Raspberry Pi ಫೌಂಡೇಶನ್ ಸುರಕ್ಷತಾ ಮಾರ್ಗದರ್ಶಿ**

# ದೌರ್ಜನ್ಯವನ್ನು ಗುರುತಿಸುವುದು ಮತ್ತು ವರದಿ ಮಾಡುವುದು, ವರದಿಗಳಿಗೆ ಪ್ರತಿಕ್ರಿಯಿಸುವುದು ಮತ್ತು ಬಹಿರಂಗಪಡಿಸುವಿಕೆಗಳನ್ನು ನಿರ್ವಹಿಸುವುದು

1. ಈ ದಸ್ತಾವೇಜನ್ನು Raspberry Pi ಫೌಂಡೇಶನ್ ಸುರಕ್ಷತಾ ನೀತಿಯ ಜೊತೆಗೆ ಓದಬೇಕು. ಈ ಮಾರ್ಗದರ್ಶಿ ದಸ್ತಾವೇಜನ್ನು ಓದುವುದರ ಜೊತೆಗೆ, ನೀವು ದಯವಿಟ್ಟು ನಮ್ಮ ಉಚಿತ ಸುರಕ್ಷತಾ ಇ-ಲರ್ನಿಂಗ್ ಮಾಡ್ಯೂಲ್ ಅನ್ನು ಪೂರ್ಣಗೊಳಿಸಬೇಕು, ಇದು 20–30 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ.

ದೌರ್ಜನ್ಯದ ವಿವಿಧ ರೂಪಗಳು

2. "ದೌರ್ಜನ್ಯವು ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಒಬ್ಬ ವ್ಯಕ್ತಿಯ ಮಾನವ ಮತ್ತು ನಾಗರಿಕ ಹಕ್ಕುಗಳ ಉಲ್ಲಂಘನೆಯಾಗಿದೆ." ನೋ ಸೀಕ್ರೆಟ್ಸ್: ಯುಕೆ ಡಿಪಾರ್ಟ್ಮೆಂಟ್ ಆಫ್ ಹೆಲ್ತ್ ಅಂಡ್ ಸೋಷಿಯಲ್ ಕೇರ್, 2000.

3. ದೌರ್ಜನ್ಯದ ಅನೇಕ ರೂಪಗಳಿವೆ, ಅವುಗಳಲ್ಲಿ ಇವು ಸೇರಿವೆ:
   a. ದೈಹಿಕ ದೌರ್ಜನ್ಯ
   b. ಭಾವನಾತ್ಮಕ ದೌರ್ಜನ್ಯ
   c. ನಿರ್ಲಕ್ಷ್ಯ
   d. ಲೈಂಗಿಕ ದೌರ್ಜನ್ಯ
   e. ಕೌಟುಂಬಿಕ ದೌರ್ಜನ್ಯ
   f. ತಾರತಮ್ಯದ ದೌರ್ಜನ್ಯ
   g. ಆರ್ಥಿಕ ದೌರ್ಜನ್ಯ

4. ದೌರ್ಜನ್ಯವು ಈ ವರ್ಗಗಳಲ್ಲಿ ಹಲವಾರು ವಿಭಾಗಗಳಲ್ಲಿ ಹೊಂದಿಕೊಳ್ಳಬಹುದು; ಉದಾಹರಣೆಗೆ, ಬೆದರಿಸುವಿಕೆ ಮತ್ತು ಕೌಟುಂಬಿಕ ಹಿಂಸೆಗಳು ಹೆಚ್ಚಾಗಿ ದೈಹಿಕ ಮತ್ತು ಭಾವನಾತ್ಮಕ ದೌರ್ಜನ್ಯವನ್ನು ಒಳಗೊಂಡಿರುತ್ತವೆ.

5. ದೌರ್ಜನ್ಯವನ್ನು ವಯಸ್ಕರು ಮಗುವಿಗೆ, ಮಗುವು ಮಗುವಿಗೆ, ಅಥವಾ ವಯಸ್ಕರು ವಯಸ್ಕರಿಗೆ ಸೇರಿದಂತೆ ಯಾರಾದರೂ ಮಾಡಬಹುದು, ಮತ್ತು ದೌರ್ಜನ್ಯ ನಡೆಸುವವರು ಜೀವನದ ಎಲ್ಲಾ ಹಿನ್ನೆಲೆಗಳು ಅಥವಾ ಸ್ತರಗಳಿಂದ ಬರಬಹುದು.

ದೌರ್ಜನ್ಯದ ಚಿಹ್ನೆಗಳನ್ನು ಗುರುತಿಸುವುದು ಹೇಗೆ?

6. ದೌರ್ಜನ್ಯದ ಚಿಹ್ನೆಗಳು ಯಾವಾಗಲೂ ಸ್ಪಷ್ಟವಾಗಿರುವುದಿಲ್ಲ, ಮತ್ತು ಮಗು ಅಥವಾ ದುರ್ಬಲ ವಯಸ್ಕರು ತಮಗೇನಾಗುತ್ತಿದೆ ಎಂದು ಯಾರಿಗೂ ಹೇಳದಿರಬಹುದು.

7. ಉದಾಹರಣೆಗೆ, ಹೀಗಿದ್ದರೆ, ಒಂದು ಮಗು ದೌರ್ಜನ್ಯವನ್ನು ಅನುಭವಿಸುತ್ತಿರಬಹುದು:

   a. ಆಗಾಗ್ಗೆ ಕೊಳಕಾಗಿರುವುದು, ಹಸಿದಿರುವುದು, ಅಥವಾ ಅಸಮರ್ಪಕ ಉಡುಪನ್ನು ಧರಿಸುವುದು
   b. ಪೋಷಕರು ಅಥವಾ ಆರೈಕೆ ಮಾಡುವವರನ್ನು ಕಂಡಾಗ ಹೆದರುವುದು
   c. ತೀವ್ರವಾಗಿ ಜಜ್ಜು ಗಾಯವಾಗುವುದು ಅಥವಾ ಗಾಯಗೊಳ್ಳುವುದು
   d. ಅವರ ವಯಸ್ಸಿಗೆ ಸೂಕ್ತವಲ್ಲದ ಲೈಂಗಿಕ ನಡವಳಿಕೆಯನ್ನು ಪ್ರದರ್ಶಿಸುವುದು

e. ಅಸುರಕ್ಷಿತ ಸಂದರ್ಭಗಳಲ್ಲಿ ಅಥವಾ ವೈದ್ಯಕೀಯ ಚಿಕಿತ್ಸೆಯಿಲ್ಲದೆ ಬಿಟ್ಟಿರುವುದು
f. ನಿರಂತರವಾಗಿ ಕೀಳಾಗಿ ತೋರಿಸಲ್ಪಡುವುದು, ಅವಮಾನಿಸುವುದು, ಬಯ್ಯುವುದು ಅಥವಾ ನಿಂದನೆ ಮಾಡುವುದು
g. ಕೌಟುಂಬಿಕ ಹಿಂಸೆ ಇರುವ ಮನೆಯಲ್ಲಿ ಬೆಳೆಯುವುದು
h. ಗಂಭೀರ ಮಾದಕವಸ್ತು ಅಥವಾ ಆಲ್ಕೋಹಾಲ್ ದೌರ್ಜನ್ಯದಲ್ಲಿ ಭಾಗಿಯಾಗಿರುವ ಪೋಷಕರು ಅಥವಾ ಆರೈಕೆದಾರರೊಂದಿಗೆ ವಾಸಿಸುವುದು

8. ಮೇಲಿನ ಪಟ್ಟಿಯು ಮಕ್ಕಳ ಮೇಲಿನ ದೌರ್ಜನ್ಯದ ಎಲ್ಲಾ ಸಂಭಾವ್ಯ ಚಿಹ್ನೆಯನ್ನು ಒಳಗೊಂಡಿಲ್ಲ; ನಿಮ್ಮನ್ನು ಚಿಂತೆಗೀಡುಮಾಡುವ ನಡವಳಿಕೆಯ ಇತರ ಅಂಶಗಳು ಅಥವಾ ಸಂದರ್ಭಗಳನ್ನು ನೀವು ಗಮನಿಸಬಹುದು.

9. ಅಂಗವೈಕಲ್ಯ ಅಥವಾ ವಿಶೇಷ ಶೈಕ್ಷಣಿಕ ಅಗತ್ಯಗಳಿರುವ ಜನರು ದೌರ್ಜನ್ಯದ ಹೆಚ್ಚಿನ ಅಪಾಯದಲ್ಲಿರುತ್ತಾರೆ. ಅವರು ದೌರ್ಜನ್ಯಯನ್ನು ಗುರುತಿಸುವ ಅಥವಾ ತಾವಾಗಿಯೇ ಮಾತನಾಡುವ ಸಾಧ್ಯತೆಯೂ ಕಡಿಮೆಯಿರುತ್ತದೆ. ಇದರರ್ಥ ಅವರ ರಕ್ಷಣೆಗೆ ನಿಮ್ಮ ಜವಾಬ್ದಾರಿ ಬಹಳ ಮುಖ್ಯವಾಗಿದೆ. ನೀವು ಯಾವುದೇ ಕಾಳಜಿಯನ್ನು ಹೊಂದಿದ್ದರೆ, ಅದು ಎಷ್ಟೇ ಸಣ್ಣದಾಗಿದ್ದರೂ, ಸಲಹೆಗಾಗಿ ನೀವು ಯಾವಾಗಲೂ Raspberry Pi ಫೌಂಡೇಶನ್‌ನ ಸುರಕ್ಷತಾ ತಂಡವನ್ನು ಸಂಪರ್ಕಿಸಬೇಕು.

ದೌರ್ಜನ್ಯದ ಚಿಹ್ನೆಗಳು ಅಥವಾ ಅನುಮಾನಗಳಿಗೆ ಹೇಗೆ ಪ್ರತಿಕ್ರಿಯಿಸುವುದು

10. ಯಾವುದೇ Raspberry Pi ಫೌಂಡೇಶನ್ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವ ವ್ಯಕ್ತಿಯೊಬ್ಬರ ಬಗ್ಗೆ ನಿಮಗೆ ಸುರಕ್ಷತಾ ಕಾಳಜಿಯನ್ನು ಹೊಂದಿದ್ದರೆ, ನೀವು ತಕ್ಷಣವೇ ಸ್ಥಳದಲ್ಲಿನ ಸಿಬ್ಬಂದಿ ಸದಸ್ಯರೊಂದಿಗೆ ವಿಷಯವನ್ನು ಪ್ರಸ್ತಾಪಿಸಬೇಕು, ಅವರು ಸ್ಥಳದ ಸುರಕ್ಷತಾ ನೀತಿಗೆ ಅನುಗುಣವಾಗಿ ಸೂಕ್ತವಾದ ಮುಂದಿನ ಕ್ರಮಗಳ ಬಗ್ಗೆ ನಿಮಗೆ ಮಾರ್ಗದರ್ಶನ ನೀಡುತ್ತಾರೆ.

11. ನೀವು ಏನನ್ನು ಗಮನಿಸಿದ್ದೀರಿ ಎಂದು ತಿಳಿಸಲು ಮತ್ತು ನೀವು ತೆಗೆದುಕೊಂಡ ಯಾವುದೇ ಕ್ರಮಗಳನ್ನು ವಿವರಿಸಲು ದಯವಿಟ್ಟು ಈ ಸಂಕ್ಷಿಪ್ತ ಆನ್‌ಲೈನ್ ಸಂರಕ್ಷಣೆಯ ಕಾಳಜಿ ವರದಿ ನಮೂನೆ ಅಥವಾ ಇಮೇಲ್ safeguarding@raspberrypi.org ಅನ್ನು ಪೂರ್ಣಗೊಳಿಸಿ. ನಮ್ಮ ತಂಡದ ಸದಸ್ಯರೊಬ್ಬರು 24 ಗಂಟೆಗಳಲ್ಲಿ ನಿಮ್ಮನ್ನು ಸಲಹೆಯೊಂದಿಗೆ ಸಂಪರ್ಕಿಸುತ್ತಾರೆ.

12. ನೀವು ಯಾರೊಂದಿಗಾದರೂ ತುರ್ತಾಗಿ ಮಾತನಾಡಲು ಬಯಸಿದರೆ, ನೀವು ನಮ್ಮ 24 ಗಂಟೆಗಳ ದೂರವಾಣಿ ಬೆಂಬಲ ಸೇವೆಗೆ ಕರೆ ಮಾಡಬಹುದು: +44 (0) 800 1337 112 (ಯುಕೆ ಮಾತ್ರ) ಅಥವಾ +44 (0) 203 6377 112 (ವಿಶ್ವದ ಯಾವುದೇ ಭಾಗದಿಂದ). ದಯವಿಟ್ಟು ಗಮನಿಸಿ, ಈ ಲೈನ್ ಅನ್ನು ಇಂಗ್ಲಿಷ್ ಭಾಷಿಕರು ಮಾತ್ರ ನಿರ್ವಹಿಸುತ್ತಾರೆ.

ದೌರ್ಜನ್ಯದ ಆರೋಪಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು

13. Raspberry Pi ಫೌಂಡೇಶನ್‌ನೊಂದಿಗೆ ಸಂಪರ್ಕ ಹೊಂದಿರುವ ಅಥವಾ ಅದರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ವಯಸ್ಕರ ಬಗ್ಗೆ ನೀವು ಒಂದು ಸುರಕ್ಷತಾ ಕಾಳಜಿಯನ್ನು ಹೊಂದಿದ್ದರೆ, ಅಥವಾ ಅದರ ಬಗ್ಗೆ ನಿಮಗೆ ಸೂಚನೆ ನೀಡಲಾದರೆ, ನೀವು ಈ ಕೆಳಗಿನವುಗಳನ್ನು ಮಾಡಬೇಕು:

    a. ನಮ್ಮ ಸಂರಕ್ಷಣೆಯ ಕಾಳಜಿ ವರದಿ ನಮೂನೆ ಅನ್ನು ಬಳಸಿ ಅಥವಾ safeguarding@raspberrypi.org ಗೆ ಇಮೇಲ್ ಮಾಡುವ ಮೂಲಕ ಸಾಧ್ಯವಾದಷ್ಟು ಬೇಗ ಕಾಳಜಿಯನ್ನು ವರದಿ ಮಾಡಿ.
    b. ಭಾಗಿಯಾಗಿರುವ ವಯಸ್ಕರು ಯಾವುದೇ ಚಟುವಟಿಕೆಯಿಂದ ಹಿಂದೆ ಸರಿಯುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಸಮಂಜಸವಾದ ಕ್ರಮಗಳನ್ನು ತೆಗೆದುಕೊಳ್ಳಿ.

14. ನೀವು ತುರ್ತು ಸುರಕ್ಷತಾ ಕಾಳಜಿಯನ್ನು ಹೊಂದಿದ್ದರೆ, ನೀವು ನಮ್ಮ 24 ಗಂಟೆಗಳ ದೂರವಾಣಿ ಬೆಂಬಲ ಸೇವೆಗೆ ಕರೆ ಮಾಡಬಹುದು: +44 (0) 800 1337 112 (ಯುಕೆ ಮಾತ್ರ) ಅಥವಾ +44 (0) 203 6377 112 (ವಿಶ್ವದ ಯಾವುದೇ ಭಾಗದಿಂದ). ದಯವಿಟ್ಟು ಗಮನಿಸಿ, ಈ ಲೈನ್ ಅನ್ನು ಇಂಗ್ಲಿಷ್ ಭಾಷಿಕರು ಮಾತ್ರ ನಿರ್ವಹಿಸುತ್ತಾರೆ.

15. ನಿಮ್ಮ ಬಗ್ಗೆ ಯಾರಾದರೂ ಕಾಳಜಿಯನ್ನು ವ್ಯಕ್ತಪಡಿಸಿದರು, ನೀವು ಕ್ಲಬ್/ ಕಾರ್ಯಕ್ರಮ/ಚಟುವಟಿಕೆಯಲ್ಲಿ ಭಾಗವಹಿಸುವುದನ್ನು ನಿಲ್ಲಿಸಬೇಕು ಮತ್ತು ನಮ್ಮ ಸಂರಕ್ಷಣೆಯ ಕಾಳಜಿ ವರದಿ ನಮೂನೆ ಯ ಮೂಲಕ ಅಥವಾ safeguarding@raspberrypi.org ಗೆ ಇಮೇಲ್ ಮಾಡುವ ಮೂಲಕ ತಕ್ಷಣವೇ Raspberry Pi ಫೌಂಡೇಶನ್‌ಗೆ ತಿಳಿಸಬೇಕು.

ದೌರ್ಜನ್ಯದ ಬಗ್ಗೆ ನಿಮಗೆ ತಿಳಿಸುತ್ತಿರುವ (ಬಹಿರಂಗಪಡಿಸುತ್ತಿರುವ) ಮಗುವಿಗೆ ಅಥವಾ ದುರ್ಬಲ ವಯಸ್ಕರಿಗೆ ಹೇಗೆ ಪ್ರತಿಕ್ರಿಯಿಸುವುದು

16. ಒಂದು ಮಗು ಅಥವಾ ದುರ್ಬಲ ವಯಸ್ಕರು ದೌರ್ಜನ್ಯದ ವಿವರಗಳನ್ನು ಅಥವಾ ನಿಮಗೆ ಕಾಳಜಿಯನ್ನು ಉಂಟುಮಾಡುವ ಯಾವುದೇ ವಿಷಯವನ್ನು ತಿಳಿಸಿದರೆ:
    a. ಸಂವೇದನಾಶೀಲತೆಯಿಂದ ಆಲಿಸಿ
    b. ವಾಸ್ತವಾಂಶಗಳನ್ನು ಪಡೆ
    c. ಯಾವುದಾದರೂ ಒಂದು ದಿಕ್ಕಿನಲ್ಲಿ ಕೊಂಡೊಯ್ಯುವ ಪ್ರಶ್ನೆಗಳನ್ನು ಕೇಳದಿರಲು ಪ್ರಯತ್ನಿಸಿ
    d. ಅವರಿಗೆ ಯಾವುದೇ ತೊಂದರೆಯಾಗುವುದಿಲ್ಲ ಮತ್ತು ಅವರು ನಿಮಗೆ ಹೇಳುವ ಮೂಲಕ ಸರಿಯಾದ ಕೆಲಸ ಮಾಡಿದ್ದಾರೆಂದು ಎಂದು ಅವರಿಗೆ ವಿಶ್ವಾಸ ನೀಡಿ
    e. ನೀವು ಈ ಮಾಹಿತಿಯನ್ನು ಇನ್ನೊಬ್ಬ ವಯಸ್ಕರೊಂದಿಗೆ ಹಂಚಿಕೊಳ್ಳುತ್ತೀರೆಂದು ಅವರಿಗೆ ವಿವರಿಸಿ

17. ಅವರು ನಿಮಗೆ ಹೇಳುವ ಎಲ್ಲವನ್ನೂ ನಿಮಗೆ ಸಾಧ್ಯವಾದಷ್ಟು ಬೇಗ ಬರೆದಿಡಿ. ಸಮಂಜಸವೆನಿಸಿದ ಕೂಡಲೇ, ನೀವು ನಿಮ್ಮ ಕಾಳಜಿಯನ್ನು ಆ ಸ್ಥಳದಲ್ಲಿ ರಕ್ಷಣೆಯ ಜವಾಬ್ದಾರಿ ಹೊಂದಿರುವವ ವ್ಯಕ್ತಿಗೆ ವರದಿ ಮಾಡಬೇಕು. ಅವರು ಮುಂದಿನ ಹಂತಗಳ ಬಗ್ಗೆ ನಿಮಗೆ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ, ಇದು ನೀವು ಕೇಳಿದ್ದನ್ನು ಸಾಧ್ಯವಾದಷ್ಟು ನಿಖರವಾಗಿ ಬರೆದಿಟ್ಟಿದ್ದೀರಿ ಎಂದು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ.

18. ನೀವು ಏನನ್ನು ಕೇಳಿದ್ದೀರಿ ಎಂದು ತಿಳಿಸಲು ಮತ್ತು ನೀವು ತೆಗೆದುಕೊಂಡ ಯಾವುದೇ ಕ್ರಮಗಳನ್ನು ವಿವರಿಸಲು ದಯವಿಟ್ಟು ಈ ಸಂಕ್ಷಿಪ್ತ ಆನ್‌ಲೈನ್ ಸಂರಕ್ಷಣೆಯ ಕಾಳಜಿ ವರದಿ ನಮೂನೆ ಅನ್ನು ಅಥವಾ ಇಮೇಲ್ safeguarding@raspberrypi.org ಅನ್ನು ಪೂರ್ಣಗೊಳಿಸಿ.  ನಮ್ಮ ತಂಡದ ಸದಸ್ಯರೊಬ್ಬರು 24 ಗಂಟೆಗಳಲ್ಲಿ ನಿಮ್ಮನ್ನು ಸಲಹೆಯೊಂದಿಗೆ ಸಂಪರ್ಕಿಸುತ್ತಾರೆ.

19. ನೀವು ಯಾರೊಂದಿಗಾದರೂ ತುರ್ತಾಗಿ ಮಾತನಾಡಲು ಬಯಸಿದರೆ, ನೀವು ನಮ್ಮ 24 ಗಂಟೆಗಳ ದೂರವಾಣಿ ಬೆಂಬಲ ಸೇವೆಗೆ ಕರೆ ಮಾಡಬಹುದು: +44 (0) 800 1337 112 (ಯುಕೆ ಮಾತ್ರ) ಅಥವಾ +44 (0) 203 6377 112 (ವಿಶ್ವದ ಯಾವುದೇ ಭಾಗದಿಂದ). ದಯವಿಟ್ಟು ಗಮನಿಸಿ, ಈ ಲೈನ್ ಅನ್ನು ಇಂಗ್ಲಿಷ್ ಭಾಷಿಕರು ಮಾತ್ರ ನಿರ್ವಹಿಸುತ್ತಾರೆ.

**Raspberry Pi** ಫೌಂಡೇಶನ್ ನೀವು ನೀಡುವ ಮಾಹಿತಿಯನ್ನು ಹೇಗೆ ನೋಡಿಕೊಳ್ಳುತ್ತದೆ

20. ಸಂರಕ್ಷಣೆಯ ಕಾಳಜಿ ಬಗ್ಗೆ ಸ್ವೀಕರಿಸಿದ ಎಲ್ಲಾ ಮಾಹಿತಿಯನ್ನು Raspberry Pi ಫೌಂಡೇಶನ್‌ನ ನಿಯೋಜಿತ ಸುರಕ್ಷತಾ ಮುಖ್ಯಸ್ಥರು ದಾಖಲಿಸಿಕೊಳ್ಳುತ್ತಾರೆ. ಒಂದು ವೇಳೆ ಈ ವಿಷಯವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಬೇಕಾದ ಅಗತ್ಯವಿದ್ದರೆ, ವರದಿಯನ್ನು ಸ್ವೀಕರಿಸಿದ 24 ಗಂಟೆಗಳ ಒಳಗೆ ಟ್ರಸ್ಟಿ ಸಂರಕ್ಷಣೆಯ ಮುಖ್ಯಸ್ಥರು ಮತ್ತು ಫೌಂಡೇಶನ್‌ನ ಸಿಇಒಗೆ ತಿಳಿಸಲಾಗುತ್ತದೆ.

21. ನಾವು ಎಲ್ಲಾ ವರದಿಗಳನ್ನು ಸುರಕ್ಷಿತವಾಗಿ ಮತ್ತು ಗೌಪ್ಯವಾಗಿ ಶೇಖರಿಸುತ್ತೇವೆ.

ಗೌಪ್ಯತಾ ನೀತಿ

22. ಸಾಧ್ಯವಿರುವಲ್ಲೆಲ್ಲ ಖಾಸಗಿತನ ಮತ್ತು ಗೌಪ್ಯತೆಯನ್ನು ಗೌರವಿಸಲಾದರೂ ಇದನ್ನು ಮಾಡುವುದರಿಂದ ಮಗು ಅಥವಾ ದುರ್ಬಲ ವಯಸ್ಕರಿಗೆ ಹಾನಿಯಾಗುವ ಅಪಾಯವಿದ್ದರೆ, ಆಗ ಅವರ ಸುರಕ್ಷತೆ ಆದ್ಯತೆ ಪಡೆಯುತ್ತದೆ.